

## ಬೇಕು ರಾಜಕೀಯ ಇಚ್ಛಾಶಕ್ತಿ

ಬಹುತೇಕ ಅತ್ಯಾಚಾರ ಪ್ರಕರಣಗಳು ವರದಿಯಾಗುವುದೇ ಇಲ್ಲ. ಸಾಮಾಜಿಕ ಬಹಿಷ್ಕಾರದ ಭೀತಿ ಸಂತ್ರಸ್ತೆಗೆ ಕಾಡುತ್ತಿರುತ್ತದೆ. ಸಮಾಜದ ದೂಷಣೆಗಳ ಕಾರಣ ಪ್ರಕರಣ ದಾಖಲಾಗುವುದಿಲ್ಲ. ತನಿಖಾ ವಿಧಾನದಲ್ಲಿ ಇನ್ನೂ ಲಿಂಗಸೂಕ್ಷ್ಮತೆ ಮೂಡಿಲ್ಲ. ಕೆಲವೊಮ್ಮೆ ತಾಂತ್ರಿಕ ಕಾರಣಗಳಿಂದಲೂ ಅಪರಾಧಿಗಳು ಶಿಕ್ಷೆಯಿಂದ ನುಣುಚಿಕೊಳ್ಳುತ್ತಿದ್ದಾರೆ. ಕೆಲವೊಮ್ಮೆ ಸಾಕ್ಷಿಗಳ ವಿಚಾರಣೆಯೇ ನಡೆಯುವುದಿಲ್ಲ. ಇದಕ್ಕೆ ಸ್ವಾಮೀಜಿಯೊಬ್ಬರ ಪ್ರಕರಣವೇ ಉದಾಹರಣೆ. ನ್ಯಾಯಾಂಗ ವ್ಯವಸ್ಥೆಯಲ್ಲೂ ಬದಲಾವಣೆ ಆಗಬೇಕಿದೆ. ಇದನ್ನು ನ್ಯಾ. ವರ್ಮಾ ಸಮಿತಿಯ ವರದಿ ಕೂಡಾ ಶಿಫಾರಸು ಮಾಡಿದೆ. ಇರುವ ಕಾನೂನುಗಳನ್ನು ಸರಿಯಾಗಿ ಜಾರಿ ಮಾಡಬೇಕು. ಆಗ ಅಪರಾಧಿಗಳಿಗೆ ಶಿಕ್ಷೆಯಾಗುವುದರಲ್ಲಿ ಸಂಶಯವಿಲ್ಲ. ಶಾಲಾ–ಕಾಲೇಜು ಪಠ್ಯಗಳಲ್ಲಿ ಎಲ್ಲ ಹಂತದಲ್ಲೂ ಲಿಂಗಸೂಕ್ಷ್ಮತೆಯ ಪಾಠಗಳು ಕಡ್ಡಾಯವಾಗಿರಬೇಕು. ಇದಕ್ಕೆ ಸರ್ಕಾರದ ರಾಜಕೀಯ ಇಚ್ಛಾಶಕ್ತಿಯ ಅಗತ್ಯವಿದೆ.

**–ಕೆ.ಎಸ್‌. ವಿಮಲಾ,**
ರಾಜ್ಯ ಉಪಾಧ್ಯಕ್ಷೆ,
ಜನವಾದಿ ಮಹಿಳಾ ಸಂಘಟನೆ




**ಒಂದು ಸಲ ಆದ ಅತ್ಯಾಚಾರವನ್ನು ಪದೇ ಪದೇ ನೆನಪಿಸಿಕೊಂಡು ಹೇಳುವ ಸಂಕಷ್ಟ ಸಂತ್ರಸ್ತೆಯದ್ದಾಗಿರುತ್ತದೆ. ನಿಧಾನಗತಿಯ ಕಾನೂನು ಪ್ರಕ್ರಿಯೆ, ಆಸ್ಪತ್ರೆ, ಠಾಣೆಗೆ ಅಲೆಯಬೇಕಾದ ಪರಿಸ್ಥಿತಿಯ ಕಾರಣಕ್ಕೇ ಬಹುತೇಕ ಸಂತ್ರಸ್ತೆಯರು ದೂರು ದಾಖಲಿಸಲು ಹಿಂದೇಟು ಹಾಕುತ್ತಾರೆ.**

ನಡೆಯುತ್ತದೆ. ಸಂತ್ರಸ್ತೆಯರು ಅನಿವಾರ್ಯವಾಗಿ ಅಪರಾಧಿಯನ್ನೇ ಮದುವೆಯಾದ ಪ್ರಕರಣಗಳು ಸಾಕಷ್ಟಿವೆ. ಇಂಥ ಪ್ರಕರಣಗಳಲ್ಲಿ ಅಪರಾಧಿಗಳು ಸಂತ್ರಸ್ತೆಗೆ ಮದುವೆಯಾಗಿ ಬಾಳು ಕೊಡುತ್ತೇನೆಂಬ ಭರವಸೆ ನೀಡಿಯೇ ಶಿಕ್ಷೆಯಿಂದ ಪಾರಾಗುತ್ತಾರೆ.

### ವಿಚಾರಣೆ ಎಂಬ ಯಾತನೆ

ಸಂತ್ರಸ್ತೆ ದೂರು ಸಲ್ಲಿಸಿ, ಪ್ರಕರಣ ಕೋರ್ಟುಗಳಲ್ಲಿ ವಿಚಾರಣೆಗೆ ಬಂದಾಗ ಪ್ರತಿ ಸಲವೂ ಆರೋಪಿ ಪರ ವಕೀಲರು ಕೇಳುವ –‘ಅತ್ಯಾಚಾರ ಹೇಗಾಯಿತು?’, ‘ಏನು ಉಡುಪು ಧರಿಸಿದ್ರಿ?’, ‘ನೀವ್ಯಾಕೆ ಅಲ್ಲಿಗೆ ಹೋಗಿದ್ರಿ...’ ಇತ್ಯಾದಿ ಪ್ರಶ್ನೆಗಳು ಸಂತ್ರಸ್ತೆಯನ್ನು ಮಾನಸಿಕವಾಗಿ ಹಿಂಸಿಸುತ್ತವೆ. ಒಂದು ಸಲ ಆದ ಅತ್ಯಾಚಾರವನ್ನು ಪದೇ ಪದೇ ನೆನಪಿಸಿಕೊಂಡು ಹೇಳುವ ಸಂಕಷ್ಟ ಸಂತ್ರಸ್ತೆಯದ್ದಾಗಿರುತ್ತದೆ. ಇದರ ಜತೆಗೆ ನಿಧಾನಗತಿಯ ಕಾನೂನು

